

ಛಾಯಾ ಭಟ್

# ಆ ಕಡುಗಪ್ಪು ಕಣ್ಣುಗಳು

ಕೊಂಕಣ ರೈಲು ಮುಂಬೈನಿಂದ ಯಾವತ್ತೂ ಖಾಲಿ ಹೊರಟಿದ್ದೇ ಇಲ್ಲ. ಜನರೋ ಜಿರಲೆಗಳೋ ಎಂದು ತಿಳಿಯದಷ್ಟು ಗಿಜಿಗಿಜಿಗುಡುವ ಬೋಗಿ. ಅದರೊಳಗೆ ಮೂಗನ್ನು ಉದ್ರೇಕಿಸಿ ರೋಮಗಳೆಲ್ಲ ಒಗ್ಗಟ್ಟಿನಿಂದ ಕೆರಳಿಸಿ ನಿಲ್ಲಿಸಿಬಿಡುವಂತಹ ವಾಸನೆ. ದುರ್ಗಂಧ ಎಂದರೆ ದುರ್ಗಂಧವೂ ಅಲ್ಲ, ಸುಗಂಧ ಎಂದು ಮೂಸುವುದೂ ಸಾಧ್ಯವಿಲ್ಲ. ಕುಟ್ಟಿ ಅಂಗಡಿಯ ಮಿಸಳಭಾಜಿ ಮಸಾಲೆಯ ಪರಿಮಳ, ಜೊರ್ ಎಂದು ಎತ್ತರದಿಂದ ಲೋಟಕ್ಕೆ ಹೊಯ್ಯುವಾಗ ಸೋಪಿನ ನೊರೆಯಂತೆ ಬುರುಗಾಗುವ ಬಿಸಿಬಿಸಿ ಚಾಯ್ ವಾಸನೆ, ಬೆವರಿನ ನಾತ ಬರಬಾರದೆಂದು ಮೈತುಂಬ ಪೂಸಿಕೊಂಡು ಕಿವಿಯ ಹಿಂದೆ ಸಿಕ್ಕಿಸಿಕೊಂಡ ಮಲ್ಲಿಗೆ ಪರಿಮಳದ ಹತ್ತಿಯ ಅತ್ತರಿನ ವಾಸನೆ, ಮಿಂದು